ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,
ಉಡುಪಿ ಜಿಲ್ಲೆ , ಉಡುಪಿ.

<u>ಸೆಷನ್ಸ್ ಕೇಸ್ ನಂಃ **28/2024**</u> <u>ಪಿಡಬ್ಲ್ಯು-2</u>

<u>ಸಿಡಬ್ಲ್ಯು-3</u>

| | | |
|---|---|---|
| ಸಾಕ್ಷಿದಾರರ ಹೆಸರು | - | ಶಂಕರಮ್ಮ |
| ಗಂಡನ ಹೆಸರು | - | ಶರಣಪ್ಪ ರೋಣ |
| ವಯಸ್ಸು | - | 37 ವರ್ಷ |
| ಉದ್ಯೋಗ | - | ಕೂಲಿ |
| ವಿಳಾಸ | - | ಪೇಟಾ ಆಲೂರಹಳ್ಳಿ,ಗದಗ. |

ದಿನಾಂಕಃ 18-07-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ</u>

1. ಚಾಸಾ1 ನನ್ನ ತಾಯಿ. ಚಾಸಾ2 ನನ್ನ ತಮ್ಮ. ಮೃತ ಜ್ಯೋತಿ ನನ್ನ ತಂಗಿ. ಆರೋಪಿ ತಂಗಿ ಗಂಡ. ಸುಮಾರು ಆರು ವರ್ಷಗಳ ಹಿಂದೆ ನನ್ನ ತಂಗಿಯ ಮದುವೆ ಆರೋಪಿತನೊಂದಿಗೆ ಊರಿನ ದೇವಸ್ಥಾನದಲ್ಲಿ ಆಗಿತ್ತು. ಮೃತ ಜ್ಯೋತಿ ಆರೋಪಿಯೊಂದಿಗೆ ಪ್ರೀತಿಸಿ ಮದುವೆ ಯಾದ್ದರಿಂದ ನಾವು ಮದುವೆಗೆ ಹೋಗಿರಲಿಲ್ಲ. ಆ ಮದುವೆಗೆ ನಮ್ಮ ಮನೆಯಲ್ಲಿ ವಿರೋದ ಇತ್ತು. ಮದುವೆ ನಂತರ ಆರೋಪಿ ಮತ್ತು ಮೃತ ಜ್ಯೋತಿ ಇಳಕಲ್ ನಲ್ಲಿ ಪ್ರತ್ಯೇಕ ಮನೆ ಮಾಡಿಕೊಂಡು ವಾಸ ಇದ್ದರು. ಸ್ವಲ್ಪ ದಿವಸದವರೆಗೆ ನಾವು ಮೃತ ಜ್ಯೋತಿ ಮತ್ತು ಆರೋಪಿ ಯೊಂದಿಗೆ ನಾವು ಮಾತನಾಡುತ್ತಿರಲಿಲ್ಲ. ನಂತರದಲ್ಲಿ ಮಾತನಾಡಲು ಪ್ರಾರಂಭಿಸಿದೆವು. ನಂತರ ಮೃತ ಜ್ಯೋತಿಗೆ ಉಡುಪಿಯಲ್ಲಿ ಪೋಲಿಸ್ ಕೆಲಸ ಸಿಕ್ಕಿದ್ದು ಕಾಪು ಪೋಲಿಸ್ ಠಾಣೆಯಲ್ಲಿ ಕೆಲಸ ಮಾಡುತ್ತಿದ್ದಳು. ಆಕೆಗೆ ಪೋಲಿಸ್ ಕೆಲಸ ಸುಮಾರು ಮೂರು ವರ್ಷದ ಹಿಂದೆ ಸಿಕ್ಕಿರುತ್ತದೆ. ಆಕೆ ಕಾಪುವಿನಲ್ಲಿ ಪೋಲಿಸ್ ಕ್ವಾಟರ್ಸ್‌ನಲ್ಲಿ ವಾಸ ಮಾಡಿಕೊಂಡಿದ್ದಳು.

2.ಆರೋಪಿ ಇಳಕಲ್ ನಲ್ಲಿ ಮೊದಲು ಅರೆಕಾಲಿಕ ಉಪನ್ಯಾಸಕನಾಗಿದ್ದು, ಸುಮಾರು ಒಂದು ವರ್ಷದಿಂದ ಈಚೆಗೆ ಉಡುಪಿಯಲ್ಲಿ ಕೆಲಸ ಮಾಡಿಕೊಂಡಿದ್ದ. ಉಡುಪಿಯಲ್ಲಿದ್ದಾಗ ಆರೋಪಿ ಮತ್ತು ಮೃತ ಜ್ಯೋತಿ ಪೋಲಿಸ್ ಕ್ವಾಟರ್ಸನಲ್ಲಿ ಒಟ್ಟಿಗೆ ವಾಸ ಮಾಡಿಕೊಂಡಿದ್ದರು. ಆರೋಪಿ ಮತ್ತು ಮೃತ ಜ್ಯೋತಿ ಒಟ್ಟಿಗೆ ವಾಸ ಮಾಡಿಕೊಂಡಿದ್ದಾಗ ಆಗಾಗ ಗಲಾಟೆ ಮಾಡಿಕೊಳ್ಳುತ್ತಿದ್ದರು. ಆತ ಯಾವಾಗಲೂ ಜ್ಯೋತಿಯನ್ನು ಅನಮಾನದಿಂದ ನೋಡುತ್ತಿದ್ದು

ಸೂಳೆಗಾರಿಕೆ ಮಾಡುತ್ತಿದ್ದಿ ಎಂದು ನಿಂಧಿಸುತ್ತಿದ್ದ. ಬೇರೆ ಗಂಡಸಿನ ಜೊತೆ ಮಾತನಾಡಿದಲ್ಲಿ ಆತ ಆಕೆಯ ಮೇಲೆ ಅನುಮಾನ ವ್ಯಕ್ತಪಡಿಸಿ ಆಕೆಗೆ ಬೈಯುತ್ತಿದ್ದ. ಈ ವಿಚಾರವನ್ನು ಆಕೆ ನನಗೆ ಪೋನಿನಲ್ಲಿ ತಿಳಿಸುತ್ತಿದ್ದು, ನಾವು ಅವರಿಗೆ ಬುದ್ದಿವಾದ ಹೇಳಿದ್ದೆವು.

3. ಆಕೆ ಮೃತ ಪಡುವವ ಸುಮಾರು 4-5 ತಿಂಗಳ ಪೂರ್ವದಲ್ಲಿ ಒಮ್ಮೆ ನಾನು ಜ್ಯೋತಿ ವಾಸ ಮಾಡಿಕೊಂಡಿದ್ದ ಕಾಪುವಿನಲ್ಲಿರುವ ವಸತಿಗೃಹಕ್ಕೆ ಬಂದಿದ್ದೆನು. ಆ ಸಮಯದಲ್ಲಿ ಆರೋಪಿ ಸಹಾ ಅದೇ ವಸತಿಗೃಹದಲ್ಲಿದ್ದ. ನಾನು ವಸತಿಗೃಹದಲ್ಲಿದ್ದಾಗಲೂ ಸಹಾ ಆರೋಪಿ ಜ್ಯೋತಿ ಯೊಂದಿಗೆ ಜಗಳ ಮಾಡುತ್ತಿದ್ದು ಜ್ಯೋತಿ ಮೇಲೆ ಅನುಮಾನ ಪಡುತ್ತಿದ್ದು ಬೇರೆ ಗಂಡಸರೊಂದಿಗೆ ಏಕೆ ಮಾತನಾಡುತ್ತೀಯಾ ಎಂದು ತೊಂದರೆ ಕೊಡುತ್ತಿದ್ದ. ಆರೋಪಿ ಜ್ಯೋತಿಯ ಮೊಬೈಲನ್ನು ಚೆಕ್ ಮಾಡುತ್ತಿದ್ದ ಮತ್ತು ಏಕೆ ಅವರಿಗೆಲ್ಲಾ ಪೋನ್ ಮಾಡುತ್ತೀ ಎಂದು ಹೇಳುತ್ತಿದ್ದ. ಆರೋಪಿ ಬಳಿ ಈ ಬಗ್ಗೆ ನಾನು ವಿಚಾರಿಸಿದಾಗ ಆರೋಪಿ ನನ್ನ ಬಳಿ ಇನ್ನೊಂದು ಪೋಲಿಸ್ ಠಾಣೆಯಲ್ಲಿ ಕೆಲಸ ಮಾಡುವ ಮನು ಎಂಬ ವ್ಯಕ್ತಿಯ ಜೊತೆ ಮಾತಾಡುತ್ತಾಳೆ ಹಾಗಾಗಿ ನಾನು ಆಕೆಯ ಮೊಬೈಲ್ ಚೆಕ್ ಮಾಡುತ್ತೇನೆ ಎಂದು ಹೇಳುತ್ತಿದ್ದ. ಸದ್ರಿ ವಿಷಯವನ್ನು ಜ್ಯೋತಿ ಬಳಿ ಕೇಳಿದಾಗ ಮನು ಮತ್ತು ನಾನು ಅಣ್ಣ ತಂಗಿ ಇದ್ದ ಹಾಗೆ ಎಂದು ಹೇಳಿರುತ್ತಾಳೆ. ನಾನು ವಸತಿಗೃಹದಲ್ಲಿ ಒಂದು ವಾರ ಉಳಿದಿದ್ದೆ. ಆ ಸಮಯದಲ್ಲಿ ಕೂಡ ಆರೋಪಿ ಇದೇ ರೀತಿಯಲ್ಲಿ ಜ್ಯೋತಿಗೆ ಹಿಂಸೆ ನೀಡುತ್ತಿದ್ದ.

4. ಸುಮಾರು 13-14 ತಿಂಗಳ ಹಿಂದೆ ಬೆಳಿಗ್ಗೆ ನಾನು ಗದಗದಲ್ಲಿರುವ ನಮ್ಮ ಮನೆಯಲ್ಲಿದ್ದಾಗ ನನ್ನ ತಾಯಿ ದೂರವಾಣಿ ಕರೆ ಮಾಡಿ ಜ್ಯೋತಿ ಉಡುಪಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿರುತ್ತಾಳೆ ಎಂದು ತಿಳಿಸಿರುತ್ತಾಳೆ. ವಿಚಾರ ತಿಳಿದ ನಾನು ತಕ್ಷಣ ಕಾಪುವಿಗೆ ಬಂದಿರುತ್ತೇನೆ. ನಾವು ಬಂದು ನೋಡಿದಾಗ ಜ್ಯೋತಿ ಅವಳು ವಾಸಿಸುತ್ತಿದ್ದ ವಸತಿಗೃಹದಲ್ಲಿ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಅವಳು ಆತ್ಮಹತ್ಯೆ ಮಾಡಿಕೊಂಡ ಸ್ಥಳದಲ್ಲಿ ಒಂದು ಪುಸ್ತಕ, ಒಂದು ಪೆನ್ ಮತ್ತು ಒಂದು ಮೊಬೈಲ್ ಇತ್ತು. ನಾನು ಆ ಪುಸ್ತಕವನ್ನು ನೋಡಿದಾಗ ಅದರಲ್ಲಿರುವ ಬರವಣಿಗೆ ಜ್ಯೋತಿಯದ್ದು ಎಂದು ಗೊತ್ತಾಯಿತು. ಈ ಹಿಂದೆ ನಾನು ಅವಳ ಬರವಣಿಗೆಯನ್ನು ನೋಡಿರುತ್ತೇನೆ. ಸದ್ರಿ ಪುಸ್ತಕದ ಒಳಗಡೆ ಮೃತ ಜ್ಯೋತಿ ಇವಳು ನಾನು ಮನು ಎಂಬವನ ಜೊತೆ ಮಾತನಾಡುತ್ತಿರುವ ಕಾರಣ ಗಂಡ ನನ್ನ ಮೇಲೆ ಅನುಮಾನ ಪಟ್ಟು ನನಗೆ ಹಿಂಸಿಸುತ್ತಿದ್ದು ಅದೇ ಕಾರಣಕ್ಕೆ ನಾನು ಆತ್ಮಹತ್ಯೆಮಾಡಿಕೊಳ್ಳುತ್ತಿದ್ದೇನೆ ಎಂದು ಬರೆದಿರುತ್ತಾಳೆ.

5. ಸದ್ರಿ ದಿನ ನಾವು ವಸತಿಗೃಹಕ್ಕೆ ಬಂದಾಗ ಆರೋಪಿ ಮನೆಯಲ್ಲೇ ಇದ್ದ. ನಾವು ಆತನನ್ನು ವಿಚಾರಿಸಿದಾಗ ಹಿಂದಿನ ದಿನ ರಾತ್ರಿ ನನಗೆ ಮತ್ತು ಆಕೆಗೆ ಜಗಳ ಆಗಿದ್ದು ಮೃತ ಜ್ಯೋತಿ ಆತನ ಕೈಗೆ ಕಚ್ಚಿರುತ್ತಾಳೆ ಈ ಕಾರಣಕ್ಕೆ ನಾನು ಆಕೆಗೆ ಹೊಡೆದಿರುತ್ತೇನೆ ಎಂದು ತಿಳಿಸಿದನು.

ನಂತರ ಆಕೆ ರೂಮಿನ ಒಳಗಡೆ ಬಾಗಿಲು ಹಾಕಿಕೊಂಡು ಮಲಗಿದ್ದು, ನಾನು ಬೆಳಿಗ್ಗೆ ಎದ್ದು ಹೋಗಿ ನೋಡಿದಾಗ ಆಕೆ ಆತ್ಮಹತ್ಯೆ ಮಾಡಿಕೊಂಡಿರುತ್ತಾಳೆ ಎಂದು ತಿಳಿಸಿರುತ್ತಾನೆ. ಆರೋಪಿಯ ಆಕೆಯ ಮೇಲೆ ಅನುಮಾನ ಪಡುತ್ತಿದ್ದ ಕಾರಣದಿಂದ ಆಕೆ ಆತ್ಮಹತ್ಯೆ ಮಾಡಿ ಕೊಂಡಿರುತ್ತಾಳೆ. ಆಕೆಯ ಶವವನ್ನು ಪರಿಶೀಲಿಸಲು ತಹಶೀಲ್ದಾರರು ಬಂದಿದ್ದು ಆ ಸಮಯದಲ್ಲಿ ಈ ವಿಚಾರವನ್ನು ಅವರ ಬಳಿ ನಾನು ಹೇಳಿರುತ್ತೇನೆ. ಪುಸ್ತಕವನ್ನು ನೋಡಿದರೆ ಗುರುತಿಸುತ್ತೇನ. ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದೆ. ನಿಪಿ-2(ಎ) ಹಸ್ತಾಕ್ಷರಗಳು ನನ್ನ ತಂಗಿಯದ್ದು ಆಗಿರುತ್ತದೆ. ಪೆನ್ನು ಮತ್ತು ಮೊಬೈಲನ್ನು ನೋಡುತ್ತಿದ್ದು ಅವುಗಳನ್ನು ಈಗಾಗಲೇ ಮುದ್ದೆಮಾಲು-1 ಮತ್ತು 2 ಎಂದು ಗುರುತಿಸಲಾಗಿದೆ.

<u>ಪಾಟಿ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ.ಆರ್.ಎ. ರವರಿಂದ</u>

1. ಆರೋಪಿ ನನ್ನ ತಂಗಿಗೆ ಆಕೆ ಸೂಳೆಗಾರಿಕೆ ಮಾಡುತ್ತಿದ್ದಾಳೆ ಎಂದು ಹೇಳುತ್ತಿದ್ದಾನೆ ಎಂಬ ವಿಷಯವನ್ನು ನಾನು ತಹಶೀಲ್ದಾರ್ ರವರ ಮುಂದೆ ಹೇಳಿದ್ದೇನೆ. ಮೃತ ಜ್ಯೋತಿ ನನ್ನ ಮನೆಗೆ ಅಂದರೆ ನನ್ನ ಗಂಡನ ಮನೆಗೆ ಬರುತ್ತಿದ್ದಳು, ಆಕೆ ತಾಯಿ ಮನೆಗೆ ಹೋಗಿಲ್ಲ. ಮದುವೆಯಾದ ಸ್ವಲ್ಪ ದಿವಸ ಆಕೆ ನಮ್ಮ ಜೊತೆ ಮಾತನಾಡಿರುವುದಿಲ್ಲ, ನಂತರ ಮಾತನಾಡಲು ಆರಂಭಿಸಿರುತ್ತೇವೆ, ಆದರೂ ಕೂಡ ಆಕೆ ಈವರೆಗೆ ನಮ್ಮ ಮನೆಗೆ ಬಂದಿರುವುದಿಲ್ಲ ಎಂದು ತಹಶೀಲ್ದಾರ್ ರವರ ಮುಂದೆ ಹೇಳಿಕೆ ನೀಡಿದ್ದೇನೆ. ಮದುವೆ ಸಮಯದಲ್ಲಿ ನನ್ನ ತಂಗಿ ಬಿ.ಎಡ್ ಓದುತ್ತಿದ್ದಳು. ಆಕೆ ಪಿ.ಜಿ.ಯಲ್ಲಿದ್ದುಕೊಂಡು ವಿದ್ಯಾಭ್ಯಾಸ ಮಾಡುತಿದ್ದಳು. ಆ ಸಮಯದಲ್ಲಿ ಆರೋಪಿ ಬೆಳಗಾಂ ನಲ್ಲಿ ಕೆಲಸ ಮಾಡುತ್ತಿದ್ದನು. ಬಿ.ಎಡ್ ನಂತರ ಆಕೆ ಬೇರೆ ಕೋಚಿಂಗ್ ಗೆ ಹೋಗಿರಲಿಲ್ಲ.

2. ನನ್ನ ತಂಗಿ 2019 ರಲ್ಲಿ ಧಾರವಾಡಕ್ಕೆ ಕೋಚಿಂಗ್ ಗಾಗಿ ಒಂದು ವರ್ಷ ಹೋಗಿದ್ದಳು ಎನ್ನುವುದು ಗೊತ್ತಿಲ್ಲ. ಆಕೆಗೆ ಪೋಲಿಸ್ ಕೆಲಸ ಸಿಗುವವರೆಗೂ ನಾವು ಆಕೆಯ ಜೊತೆ ಮಾತನಾಡುತ್ತಿರಲಿಲ್ಲ ಸರಿಯಲ್ಲ, ಆದಕಾರಣಕ್ಕೆ ಆಕೆ ಧಾರವಾಡಕ್ಕೆ ಕೋಚಿಂಗ್ ಗೆ ಹೋದ ಬಗ್ಗೆ ನಮಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಆರೋಪಿ ಬೆಳಗಾಂ ನಲ್ಲಿ ಕೆಲಸ ಬಿಟ್ಟು ಹುನಗುಂದಕ್ಕೆ ಬಂದಾಗ ಹುನಗುಂದದ ಮನೆಯಲ್ಲಿ ಆರೋಪಿ, ನನ್ನ ತಂಗಿ ಮತ್ತು ಆರೋಪಿಯ ತಮ್ಮ ವಾಸ ಮಾಡುತ್ತಿದ್ದರು. ಸದ್ರಿ ಮನೆಗೆ ನಾನು ಹೋಗಿದ್ದೆನು. ಸದ್ರಿ ಮನೆ ಚಿಕ್ಕ ಮನೆಯಾಗಿತ್ತು. ಆ ಸಮಯದಲ್ಲಿ ನನ್ನ ತಂಗಿ ಸರಕಾರಿ ಕೆಲಸಕ್ಕೆ ಸೇರಲು ಪ್ರಯತ್ನ ಮಾಡುತ್ತಿದ್ದಳು. ನನ್ನ ತಂಗಿ ಪೋಲಿಸ್ ತರಬೇತಿಯನ್ನು ಉಡುಪಿಯಲ್ಲಿ ಮಾಡಿದ್ದಾಳೆ. ನನ್ನ ತಂಗಿ ಸಾಯುವ ಪೂರ್ವದ ಒಂದು ವರ್ಷದಿಂದ ಆರೋಪಿ ಆಕೆಯೊಂದಿಗೆ ಕಾಪುವಿನಲ್ಲಿ ವಾಸ ಮಾಡುತ್ತಿದ್ದ. ನನ್ನ ತಂಗಿ ಸಾಯುವ ಪೂರ್ವದ ಒಂದು ವರ್ಷದಿಂದ ಆರೋಪಿ ಕೆ.ಎಸ್.ಆರ್.ಟಿ.ಸಿ.ಯಲ್ಲಿ ನೌಕರಿ

ಮಾಡುತ್ತಿದ್ದ. ನನ್ನ ತಂಗಿ ತೀರಿಕೊಳ್ಳುವ ನಾಲ್ಕು ತಿಂಗಳ ಹಿಂದೆ ಆಕೆಯ ಮನೆಗೆ ನಾನು ಬಂದಿದ್ದೆನು.

3. ನನ್ನ ತಂಗಿ ಮದುವೆಯಾದ ಆರು ವರ್ಷಗಳ ನಂತರದಲ್ಲಿ ಆಕೆ ಮತ್ತು ಆರೋಪಿ ಒಂದೇ ಮನೆಯಲ್ಲಿ ವಾಸ ಮಾಡಲು ಪ್ರಾರಂಭಿಸಿದ್ದರು ಎಂದರೆ ಸರಿ. ಹುನಗುಂದದಲ್ಲಿ ಇದ್ದಾಗ ನನ್ನ ತಂಗಿಗೆ ನಾನು ಆಕೆ ಇಲ್ಲಿಯವರೆಗೆ ಏಕೆ ಗರ್ಭ ಧರಿಸಿಲ್ಲ ಎಂದು ಕೇಳಿಲ್ಲ. ಆಕೆ ಸರಕಾರಿ ಕೆಲಸ ಸಿಗುವವರೆಗೂ ಮಕ್ಕಳು ಬೇಡ ಎಂದು ನನ್ನ ಬಳಿ ಹೇಳಿಲ್ಲ. ಮೃತ ಜ್ಯೋತಿ ಚಾಸಾ10 ರವರ ಜೊತೆ ಮೊಬೈಲಿನಲ್ಲಿ ವೀಡಿಯೋ ಚಾಟ್ ಮಾಡುತ್ತಾಳೆ ಎಂದು ಆರೋಪಿ ನನಗೆ ಹೇಳಿರುತ್ತಾನೆ. ಸದ್ರಿ ವಿಷಯವನ್ನು ಆರೋಪಿ ಖುದ್ದಾಗಿ ಆತನೇ ಬಂದು ಹೇಳಿರುತ್ತಾನೆ. ಆಗ ಆತ ನಮಗೆ ಜ್ಯೋತಿಗೆ ಬುದ್ದಿ ಹೇಳಲು ಹೇಳಿದ್ದ. ನಾವು ಸದ್ರಿ ವಿಷಯವನ್ನು ಜ್ಯೋತಿ ಬಳಿ ಕೇಳಿದಾಗ ಆಕೆ ನಾವು ಎಲ್ಲರ ಜೊತೆ ಮಾತನಾಡುವ ರೀತಿ ಆತನ ಜೊತೆ ಸಹಾ ಮಾತನಾಡುತ್ತೇನೆ ಮತ್ತು ನಾವು ಅಣ್ಣ ತಂಗಿ ಇದ್ದ ಹಾಗೆ ಎಂದು ಹೇಳಿರುತ್ತಾಳೆ. ನಾವು ಆಕೆಗೆ ಬೇರೆ ಗಂಡಸರ ಜೊತೆ ವೀಡಿಯೋ ಚಾಟ್ ಮಾಡಬೇಡ ಎಂದು ಹೇಳಿಲ್ಲ. ನಾನು ಚಾಸಾ10 ರವರನ್ನು ಯಾವತ್ತೂ ಭೇಟಿಯಾಗಿಲ್ಲ.

4. ನನ್ನ ಮದುವೆಯಾಗಿ 20 ವರ್ಷ ಆಯಿತು. ನಾನು ಮತ್ತು ನನ್ನ ಗಂಡ ವರ್ಷದಲ್ಲಿ 4-5 ಬಾರಿ ಗಲಾಟೆ ಮಾಡಿಕೊಳ್ಳುತ್ತೇವೆ. ಎಲ್ಲಾ ಗಂಡಸರಿಗೆ ತನ್ನ ಹೆಂಡತಿ ಬೇರೆ ಗಂಡಸರ ಜೊತೆ ಹೆಚ್ಚಾಗಿ ಮಾತನಾಡಬಾರದು ಎನ್ನುವ ಭಾವನೆ ಇರುತ್ತದೆ ಎಂದರೆ ಸರಿ. ಆರೋಪಿ ನನ್ನ ತಂಗಿಯನ್ನು ಪ್ರೀತಿಸಿ ಮದುವೆಯಾದ ಕಾರಣಕ್ಕೆ ಆತ ಕಾಪುವಿಗೆ ಬಂದು ಆಕೆಯ ಜೊತೆ ವಾಸ ಇರಲು ಬಂದಿದ್ದ ಎಂದರೆ ಸರಿ. ನನ್ನ ತಂಗಿ ಆತ್ಮಹತ್ಯೆ ಮಾಡಿಕೊಳ್ಳುವ ಪೂರ್ವದಲ್ಲಿ ನನ್ನ ತಂಗಿ ಮತ್ತು ಆರೋಪಿ ಜಂಟಿ ಹೆಸರಿನಲ್ಲಿ ಒಂದು ನಿವೇಶನ ಖರೀದಿ ಮಾಡಿದ್ದಾರೆ ಎಂದರೆ ಸರಿ. ನಿವೇಶನ ಖರೀದಿ ಮಾಡಿದ ವಿಷಯ ನನಗೆ ಪೋನ್ ಮೂಲಕ ತಿಳಿಸಿದ್ದಳು. ಆರೋಪಿ ನನ್ನ ತಂಗಿಗೆ ನಿನಗೆ ಬೇರೆ ಹುಡುಗನೊಂದಿಗೆ ಸಂಬಂಧ ಇದೆ ಮತ್ತು ಕೆಲಸಕ್ಕೆ ಬೇಗ ಹೋಗುವುದು, ತಡವಾಗಿ ಬರುವುದು ಮಾಡುತ್ತೀಯಾ ಎಂದು ಅನುಮಾನವಾಗಿ ಆಕೆಯೊಂದಿಗೆ ವರ್ತಿಸುತ್ತಿದ್ದ ಎಂದು ನನ್ನ ತಂಗಿ ನನ್ನ ಬಳಿ ಹೇಳುತ್ತಿದ್ದಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ನಾವು ಕಾಪುವಿಗೆ ಬಂದಾಗ ಆರೋಪಿ ನನ್ನನ್ನು ಮತ್ತು ನನ್ನ ಮಕ್ಕಳನ್ನು ಶ್ರೀ ಕೃಷ್ಣ ದೇವಸ್ಥಾನಕ್ಕೆ ಮತ್ತು ಬೀಚ್ ಗೆ ಕರೆದುಕೊಂಡು ಹೋಗಿದ್ದರು. ಕಾಪುವಿನ ವಸತಿಗೃಹದಲ್ಲಿ ಜೋರಾಗಿ ಮಾತನಾಡಿದರೆ ಹತ್ತಿರದಲ್ಲಿರುವ ಪೋಲಿಸ್ ಠಾಣೆಗೆ ಕೇಳುತ್ತದೆ ಎಂದರೆ ಸರಿ. ನಾವು ಕಾಪು ವಸತಿಗೃಹದಲ್ಲಿ ಇದ್ದಾಗ ಮತ್ತು ಬೇರೆ ಸಮಯದಲ್ಲಿ ಯಾವತ್ತೂ ಆರೋಪಿ ಮತ್ತು ಜ್ಯೋತಿ ನಡುವೆ ಯಾವುದೇ ಗಲಾಟೆ ಆಗಿಲ್ಲ ಎಂದರೆ ಸರಿಯಲ್ಲ. ಜ್ಯೋತಿ ನನ್ನ ಜೊತೆ ವೀಡಿಯೋ

ಕಾಲ್ ಮಾಡಿ ಮಾತನಾಡುತ್ತಿದ್ದಳು. ಆಕೆ ಸಾಯುವ ಎರಡು ದಿನ ಹಿಂದೆ ನನ್ನ ಜೊತೆ ಮೊಬೈಲಿನಲ್ಲಿ ಮಾತನಾಡಿದ್ದಾಳೆ. ನಾವು ಬಂದಾಗ ಆರೋಪಿ ಪೋಲಿಸ್ ಠಾಣೆಯಲ್ಲಿ ಇದ್ದನು. ಆಗ ನಾವು ಆತನ ಜೊತೆ ಏನೂ ಮಾತನಾಡಿಲ್ಲ, ಆತನೂ ಸಹ ನಮ್ಮ ಬಳಿ ಏನೂ ಹೇಳಿಲ್ಲ. ಆ ದಿನ ನಾವು ಬೆಳಿಗ್ಗೆ 8-00 ಗಂಟೆಗೆ ಬಿಟ್ಟು ಸಂಜೆ 7-00 ಗಂಟೆಗೆ ಕಾಪುವಿಗೆ ಬಂದಿರುತ್ತೇವೆ. ನನ್ನ ತಂಗಿ ಆತ್ಮಹತ್ಯೆ ಮಾಡಿಕೊಂಡಿದ್ದಕ್ಕೆ ಮತ್ತು ಆರೋಪಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಅವಳು ದುಡುಕಿ ನಿರ್ಧಾರ ತೆಗೆದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದರೆ ಸರಿಯಲ್ಲ. ನಾನು ಹೇಳಿದ ರೀತಿ ಸ್ಥಳದಲ್ಲಿ ಯಾವುದೇ ಪುಸ್ತಕ, ಪೆನ್ನು ಮತ್ತು ಮೊಬೈಲ್ ಇರಲಿಲ್ಲ ಎಂದರೆ ಸರಿಯಲ್ಲ. ಯಾವುದೇ ವಿಷಯ ಗೊತ್ತಿಲ್ಲದಿದ್ದರೂ ಸಹಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅನಕ್ಷರಸ್ಥೆ ಇರುವ ಕಾರಣ ನಿಪಿ-2(ಎ) ಯಾರ ಹಸ್ತಾಕ್ಷರದ್ದು ಎಂದು ನನಗೆ ಹೇಳು ಆಗುವುದಿಲ್ಲ ಎಂದರೆ ಸರಿಯಲ್ಲ. ಅದು ಮೃತಳ ಹಸ್ತಾಕ್ಷರ ಅಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

2 ನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.